



# ನಮಸ್ತೆ, ನಾನು ಬಾಳೆ!

ಬಾಳೆಹಣ್ಣುಗಳನ್ನು ದೇವರಿಗೆ ನೈವೇದ್ಯ ಮಾಡಿ ನಮಸ್ಕರಿಸುತ್ತೇವೆ. ಆದರೆ ಬಾಳೆ ಹಣ್ಣುಗಳೇ ನಮಗೆ ನಮಸ್ಕರಿಸಿದರೆ? ಹೌದು! ಈ ಬಾಳೆಗಿಡದ ಹಣ್ಣಿನ ಚಿಪ್ಪುಗಳನ್ನು ನೋಡಿ ಆಶ್ಚರ್ಯವಾಗುತ್ತದಲ್ಲವೇ? ಇಂಥದೊಂದು ಬಾಳೆಗಿಡವಿದೆ. ಇದಕ್ಕೆ ನಮಸ್ಕರಿಸುವ ಕರಗಳ ಬಾಳೆ ಎಂದು ಕರೆಯುತ್ತಾರೆ. ಚಿಪ್ಪಿನಲ್ಲಿರುವ ಅಕ್ಕ–ಪಕ್ಕದ ಬಾಳೆಕಾಯಿಗಳು ಒಂದಕ್ಕೊಂದು ಬೆಸೆದು. ಪ್ರಾರ್ಥಿಸುವ ಕೈಗಳಂತೆ ಗೋಚರಿಸುತ್ತವೆ.

ಇದು ಫಿಲಿಪ್ಪೈನ್ಸ್‌ನಲ್ಲಿ ಅಭಿವೃದ್ಧಿಪಡಿಸಿದ ಹೈಬ್ರಿಡ್ ತಳಿಯಾಗಿದೆ. ಮ್ಯೂಸಾ ಅಕ್ಯುಮಿನೇಟಾ ಮತ್ತು ಮ್ಯೂಸಾ ಬಲ್ಬಿಸಿಯಾನಾ ಕೊಲ್ಲಾ ಇವುಗಳಿಂದ ಜನ್ಮತಾಳಿದೆ. ಮ್ಯೂಸೇಸಿ ಮ್ಯೂಸಾ ಜಾತಿಗೆ ಸೇರಿದೆ.

ಇದು 20 ರಿಂದ 30 ಅಡಿ ಎತ್ತರದವರೆಗೆ ಬೆಳೆಯುತ್ತದೆ. ಕಾಂಡದ ಸುತ್ತಳತೆ 3 ಅಡಿ ಇದೆ. ಗೊನೆಯಲ್ಲಿ 16 ಚಿಪ್ಪುಗಳಿರುತ್ತವೆ. ಪ್ರತಿ ಚಿಪ್ಪಿನಲ್ಲಿ 12 ರಿಂದ 20 ಕಾಯಿಗಳಿರುತ್ತವೆ.

ಕಾಯಿಗಳನ್ನು ಹೆಚ್ಚಾಗಿ ಅಡುಗೆಗೆ ಬಳಸುವರು. ಮಾಗಿದ ಹಣ್ಣುಗಳಿಗೆ ವೆನಿಲಾ ಸುವಾಸನೆಯಿದೆ. ತಿನ್ನಲೂ ಬಳಸಬಹುದು. ಇದರ ಆಹಾರ ಪದಾರ್ಥಗಳು ಸಿಂಗಾಪುರ, ಮಲೇಷಿಯಾಗಳಲ್ಲಿ ಪ್ರಸಿದ್ಧಿಯಾಗಿವೆ.

■ ಪ್ರಕಾಶ್ ಎಸ್.ಮನ್ನಂಗಿ